ಏತ ನೀರಾವರಿ ಯೋಜನೆಯ ಬಗ್ಗೆ

೯೫. ಶ್ರೀ ಎಸ್. ಜಿ. ನಂಜಯ್ಯನಮಠ (ಗಂಳೇದಗಂಡ್ಡ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಹುನಗುಂದ ತಾಲ್ಲೂಕಿನಲಿ ರಾಮಥಾಳ ಹತ್ತಿರದಲ್ಲಿರುವ ಮಾಕವ್ವನಮಂರಡಿ ಏತ ನೀರಾವರಿ ಯೋಜನೆಯು ಮಂಜೂರಾಗಿದೆಯೇ ?

ಅ) ಹಾಗಿದ್ದಲ್ಲಿ ಆ ಯೋಜನೆಗೆ ಒದಗಿಸಿರುವ ಹಣವೆಷ್ಟು ?

ಆ) ಕೆಲಸವನ್ನು ಪ್ರಾರಂಭಿಸುವುದು ಯಾವಾಗ ?

ಈ) ಏತ ನೀರಾವರಿ ನಿಗಮದವರು ಪ್ರಾರಂಭಿಸುವರೆ ? ಅಥವಾ ನೀರಾವರಿ ಇಲಾಖೆಯವರೂ ಈ ಕೆಲಸವನ್ನು ಪ್ರಾರಂಭಿಸುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ೧೯೮೭-೮೮ರ ಆಯವ್ಯಯದಲ್ಲಿ ೧೦,೦೦೦ ರೂ.ಗಳು.

ಇ) ಯೋಜನೆಯು ಸೂಕ್ತವಾಗಿ ಕಂಡುಬಂದಲ್ಲಿ ಮುಂಬರುವ ವಾರ್ಷಿಕ ಕಾರ್ಯಕ್ರಮದಲ್ಲಿ ಸೇರಿಸಿ ತೆಗೆದುಕೊಳ್ಳಲಾಗುವುದು.

ಈ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ನಿಯಮಿತ ಅವರಿಂದ ಪ್ರಾರಂಭಿಸಲಾಗುವುದು.

ಕಾವಾ ಕಲಾ ಅಕಾಡೆಮಿಗೆ ಮನ್ನಣೆ

೯೬. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದಲ್ಲಿ ಕಾವಾ ಕಲಾ ಅಕಾಡೆಮಿಗೆ ಮೈಸೂರು ವಿಶ್ವವಿದ್ಯಾನಿಲಯದ ಮನ್ನಣೆ ದೊರಕಿದೆಯೆ ?

ಆ) ಇಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ಮತ್ತು ಎಷ್ಟು ವರ್ಷದ ಶಿಕ್ಷಣ ಜಾರಿಯಲ್ಲಿದೆ ?

ಇ) ಈ ಶಾಲೆಗೆ ಯಾವ ವಿಶ್ವವಿದ್ಯಾಲಯದ ಮನ್ನಣೆ ಇಲ್ಲದೆ ವಿದ್ಯಾರ್ಥಿಗಳು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಳ್ಳುವ ಕ್ರಮವೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ೧೦೯. ೫ ವರ್ಷದ ಪದವಿ ಶಿಕ್ಷಣ

ಇ) ಬಂದಿದೆ.

ಈ) ಈ ಬಗ್ಗೆ ವಿಶೇಷ ಕಾನೂನು ರಚಿಸಲಾಗುತ್ತಿದೆ.